# 03-02-2025

# BUDGET DISCUSSION 2025 BY DEP ECONOMICS












**ಪ್ರಕಟಣೆಯ ಕೃಪೆಗಾಗಿ**

**“ಆದಾಯದ ಮೂಲಗಳನ್ನು ಅಂದಾಜಿಸಿದಾಗ ಮಾತ್ರ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸಲು ಸಾಧ್ಯ”**

**- ಡಾ. ಈ ಶಿವಪ್ರಸಾದ್**

ದೇಶದ ಸಮೃದ್ಧಿಯ ಹಿತದೃಷ್ಟಿಯಿಂದ ರಾಜನು ವಿಪತ್ತುಗಳ ಸಾಧ್ಯತೆಯನ್ನು ಮುಂಗಾಣುವಲ್ಲಿ ಶ್ರದ್ಧೆಯಿಂದಿರಬೇಕು, ಅವು ಉದ್ಭವಿಸುವ ಮೊದಲೇ ಅವುಗಳನ್ನು ತಪ್ಪಿಸಲು ಪ್ರಯತ್ನಿಸಬೇಕು, ಸಮಸ್ಯೆಗಳನ್ನು ನಿವಾರಿಸಬೇಕು. ಆರ್ಥಿಕ ಚಟುವಟಿಕೆಗೆ ಇರುವ ಎಲ್ಲಾ ಅಡೆತಡೆಗಳನ್ನು ತೆಗೆದುಹಾಕಬೇಕು ಮತ್ತು ರಾಜ್ಯಕ್ಕೆ ಆದಾಯ ನಷ್ಟವನ್ನು ತಡೆಯಬೇಕು ಎಂಬ ಕೌಟಿನಲ್ಯನ ನುಡಿಯಂತೆ ಪ್ರತಿರಾಷ್ಟ್ರ ತನ್ನ ಆದಾಯ ಮೂಲಗಳನ್ನು ಅಂದಾಜಿಸಬೇಕು ಎಂದು ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಹಳ್ಳಿಯ ಶ್ರೀಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಈ.ಶಿವಪ್ರಸಾದ್ ಅವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ “2025–26ನೇ ಆರ್ಥಿಕ ಸಾಲಿನ ಕೇಂದ್ರ ಬಜೆಟ್ ಕುರಿತು ವಿಶೇಷ ಉಪನ್ಯಾಸ ಹಾಗೂ ವಿದ್ಯಾರ್ಥಿಗಳೊಡನೆ ಸಂವಾದ” ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಅವರು ಮಾತನಾಡುತ್ತಿದ್ದರು. ಆಯವ್ಯಯದ ಅರ್ಥ ಮತ್ತು ವ್ಯಾಖ್ಯೆ, ಆಯವ್ಯಯದ ಪ್ರಮುಖ ಭಾಗಗಳಾದ ಕಂದಾಯ ವೆಚ್ಚ, ಬಂಡವಾಳ ವೆಚ್ಚ, ಆದಾಯದ ಮೂಲಗಳಾದ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ ಹಾಗೂ ಸಾಲದ ಮೂಲಗಳಾದ ಆಂತರಿಕ ಸಾಲ ಮತ್ತು ಬಾಹ್ಯ ಸಾಲಗಳ ಕುರಿತು ವಿದ್ಯಾರ್ಥಿಗಳಿಗೆ ಅರ್ಥೈಸಿಸಿದರು. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸರ್ಕಾರವು ನೇರ ತೆರಿಗೆಗಳಲ್ಲಿ ಅನುಕೂಲತೆಯನ್ನು ನೀಡುವುದರ ಬದಲಾಗಿ ಪರೋಕ್ಷ ತೆರಿಗೆಗಳಲ್ಲಿ ಅನುಕೂಲತೆ ಒದಗಿಸಿದ್ದರೆ ಬಹುಷಃ ಮಧ್ಯಮ ವರ್ಗ ಮತ್ತು ಬಡವರ್ಗದವರಿಗೆ ಸಹಾಯವಾಗುತ್ತಿತ್ತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಯವ್ಯಯ ಸಿದ್ಧತೆಯಲ್ಲಿ ಸಾಂವಿಧಾನಿಕ ನಿಬಂಧನೆಗಳು ಎಂಬ ವಿಷಯ ಕುರಿತು ಅಂತಿಮ ಬಿಎ ವಿದ್ಯಾರ್ಥಿನಿ ಕು.ರಹೀಮ ರೋಷನ್ ಕನ್‌ವಳ್ಳಿ ವಿಚಾರ ಮಂಡನೆ ಮಾಡಿದರೇ, ಮತ್ತೋರ್ವ ವಿದ್ಯಾರ್ಥಿನಿ ಕು.ಸ್ಪಂದನ ಕಶ್ಯಪ್ “2025–26ನೇ ಸಾಲಿನ ಕೇಂದ್ರ ಬಜೆಟ್‌ನ ಪ್ರಮುಖಾಂಶ”ಗಳನ್ನು ಕುರಿತು ವಿಚಾರ ಮಂಡಿಸಿದರು.

ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾರ್ಯಕ್ರಮವನ್ನು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಆರ್. ಸಿದ್ಧರಾಜು ಸ್ವಾಗತಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಪವಿತ್ರ.ಟಿ ವಂದನಾರ್ಪನೆ ಮಾಡಿದರು.




2025-2026
• The Union Budget 2025 was started by the Quote "DESAMANTE MATTI KAADOYI DESAMANTE MANUSHULOYI" by the Telugu poet and playwright "SHRI GURAJADA APPA RAO'S" It means "A COUNTRY IS NOT JUST IT'S SOIL;A COUNTRY IS IT'S PEOPLE".
• The Finance Minister NIRMALA SITARAMAN presented Union Budget 2025-2026 with the theme "SABKA VIKAS".
• SABKA VIKAS theme says that stimulating balanced growth of all regions.
1. Zero poverty
2. 100% good quality school education
3. Access to high quality affordable healthcare
4. 100% skilled labour
5. 70% woman in economic activities
6. Farmers making our country the "FOOD BASKET OF THE WORLD"






Department of Economics
Special Lecture series
DISCUSSION ON CENTRAL BUDGET-2025-26
Dr.Shivaprasad E



